(9)

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಶಾಂತಿನಗರ ಉಪವಿಭಾಗ, 7ನೇ ಮಹಡಿ ಪಿ.ಯು.ಕಟ್ಟಡ, ಮೇಯೋಹಾಲ್, ಎಂ.ಜಿ.ರಸ್ತೆ, ಬೆಂಗಳೂರು.**

ಸಂಖ್ಯೆ : ಎ.ಇ.ಇ/ಶಾನ/ಪಿಆರ್/09/2021-22 ದಿನಾಂಕ : 07-04-2021

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಶಾಂತಿನಗರ ವಿಭಾಗ, ಪೂರ್ವ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ -116 ನೀಲಸಂದ್ರದ ವಾರ್ಡ್ ಸಮಿತಿ ಸಭೆಯನ್ನು ಕೆನೋಪಿ ಸಂಭಾಗಣ 2ನೇ ಮಹಡಿ, ಪಿ.ಯು. ಬಿಲ್ಡಿಂಗ್, ಮೇಯೋಹಾಲ್, ಎಂ.ಜಿ. ರಸ್ತೆಯಲ್ಲಿ ದಿನಾಂಕ : 07-04-2021 ರಂದು ಬೆಳಗ್ಗೆ 11:00 ಗಂಟೆಗೆ ಸಭೆಯಲ್ಲಿ ಚರ್ಚಿಸಲಾದ ಸಭೆಯ ನಡವಳಿಗಳು.**

**ಸಭೆಗೆ ಹಾಜರಿದ್ದ ಸದ್ಯಸರು ಹಾಗೂ ಅಧಿಕಾರಿಗಳು**

| ಕ್ರಮ ಸಂಖ್ಯೆ | ಸದ್ಯಸರ ಹೆಸರುಗಳು |
|---|---|
| 1 | ಡಾ॥ ಸಂಗಮಿತ್ರ ನೋಡಲ್ ಅಧಿಕಾರಿ (ನೀಲಸಂದ್ರ 116) ಹಾಗೂ ಉಪ ಆರೋಗ್ಯಾಧಿಕಾರಿಗಳು ಪೂರ್ವ. |
| 2 | ಶ್ರೀ ಮಧು ಆರ್, ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ. |
| 3 | ಶ್ರೀ ಹರ್ಷ ಎಸ್, ಕಿರಿಯ ಅಭಿಯಂತರರು (ಕಾರ್ಯದರ್ಶಿ) |
| 4 | ಶ್ರೀ ಅಪ್ಪುರಾಜ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ, ಘನತ್ಯಾಜ್ಯ) |
| 5 | ಶ್ರೀ ಸಗಾಯ್‌ರಾಜ್, ಹಿರಿಯ ಆರೋಗ್ಯ ಪರಿವೀಕ್ಷಕರು, (ನೀಲಸಂದ್ರ) |
| 6 | ಶ್ರೀ ನೀಲಾಂಜನಪ್ಪ, ಕಿರಿಯ ಆರೋಗ್ಯ ಪರಿವೀಕ್ಷಕರು, (ನೀಲಸಂದ್ರ) |
| 7 | ಶ್ರೀ ಬಸವರಾಜ, ಸಹಾಯಕ ಕಂದಾಯ ಅಧಿಕಾರಿಗಳು, ಶಾಂತಿನಗರ |
| 8 | ಶ್ರೀ ಗುರುಮೂರ್ತಿ, ಕಂದಾಯ ಪರಿವೀಕ್ಷಕರು, (ನೀಲಸಂದ್ರ) |
| 9 | ಶ್ರೀ ಶ್ರೀನಿವಾಸ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 10 | ಶ್ರೀ ಅಕ್ರಮ್ ಪಾಷಾ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 11 | ಶ್ರೀ ನಾಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ. |
| 12 | ಶ್ರೀ ವೆಂಕಟೇಶ್ವರ್ ರೆಡ್ಡಿ, ಸಹಾಯಕ ಅಭಿಯಂತರರು, ಬೆಸ್ಕಾಂ. |
| 13 | ಶ್ರೀ ಮಂಜಪ್ಪ, ಸಹಾಯಕ ಅಭಿಯಂತರರು, ವಿದ್ಯುತ್, ಬಿಬಿಎಂಪಿ. |
| 15 | ಶ್ರೀ ನವೀನ್‌ಕುಮಾರ್, ಮಾರ್ಷಲ್ (ನೀಲಸಂದ್ರ) |
| 16 | ಶ್ರೀಮತಿ ಅಮೃತ ಮೇರಿ, ಸದ್ಯಸರು (ನೀಲಸಂದ್ರ) |
| 17 | ಶ್ರೀಮತಿ ಸುಮತಿ, ಸದ್ಯಸರು (ನೀಲಸಂದ್ರ) |
| 18 | ಶ್ರೀ ಗೋವಿಂದ್‌ರಾಜ್, ಸದ್ಯಸರು (ನೀಲಸಂದ್ರ) |
| 19 | ಶ್ರೀ ಅನೀಜ್ ಅಕ್ತರ್, ಸದ್ಯಸರು (ನೀಲಸಂದ್ರ) |
| 20 | ಶ್ರೀ ಅಲ್‌ಫೋಜ್, ಸದ್ಯಸರು (ನೀಲಸಂದ್ರ) |

**ಶಾಂತಿನಗರ ಕ್ಷೇತ್ರದ ಮಾನ್ಯ ಶಾಸಕರಾದ ಎನ್.ಎ ಹ್ಯಾರೀಸ್ ರವರು ಸಭೆಯಲ್ಲಿ ಪಾಲ್ಗೊಂಡು ಸಲಹೆ, ಸೂಚನೆ, ಹಾಗೂ ಮಾರ್ಗದರ್ಶನ ನೀಡಿದರು.**

ಸಮಿತಿಯ ಅಧ್ಯಕ್ಷರಾದ, ಶ್ರೀಮತಿ. ಡಾ॥ ಸಂಗಮಿತ್ರ ನೋಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಪ್ರಾರಂಭಿಸುತ್ತಾ ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅದಿಕಾರಿಗಳನ್ನು ಸ್ವಾಗತಿಸುತ್ತಾ, ಹಿಂದಿನ ಸಭೆಯಲ್ಲಿ ಕೈಗೊಂಡಿರುವ ನಡುವಳಿಗಳ ಕ್ರಮಗಳ ಬಗ್ಗೆ ಚರ್ಚಿಸುತ್ತಾ, ಸಭೆಯನ್ನು ಮುಂದುವರೆಸುತ್ತಾ ಸಭೆಯನ್ನು ಪ್ರಾರಂಭಿಸಿದರು.

ಮೊದಲನೆಯದಾಗಿ ವಾರ್ಡಿನಲ್ಲಿ ಕೋವಿಡ್-19 ನಿಯಂತ್ರಣ ಸಂಬಂದ WDC (ವಾರ್ಡ್ DETER ಸಮಿತಿ) "ಸಮಿತಿಯನ್ನು ರಚಿಸುವ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡುತ್ತಾ blcares.in ಮುಖಾಂತರ ವಾರ್ಡ್ ನಂ.116ಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಸ್ವಯಂ ಸೇವಕರು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ಅಗತ್ಯ ಕ್ರಮವಹಿಸಲು ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳಿಗೆ ತಿಳಿಸಲಾಯಿತು. ಈಗಾಗಲೇ ವಾರ್ಡ್‌ನಲ್ಲಿರುವ ವೈದ್ಯರ, PARA MEDICAL, ನರ್ಸಿಂಗ್, ಆರೋಗ್ಯ ತಜ್ಞರು, ಸರ್ಕಾರಿ ಅಧಿಕಾರಿಗಳು, ಖಾಸಗಿ ಆಸ್ಪತ್ರೆಗಳ ಪಟ್ಟಿ (Nursing Home), Professional Institutions, Lodge ಮತ್ತು ಪ್ರಮುಖ ಮೂಲಭೂತ ಸೌಕರ್ಯಗಳ ಪಟ್ಟಿಯನ್ನು ಸಿದ್ಧಪಡಿಸಿ WARD DETER ಸಮಿತಿಗೆ ಸಲ್ಲಿಸಲು ಕೋರಲಾಯಿತು.

ಉಲ್ಲೇಖದಲ್ಲಿನ ಸರ್ಕಾರದ ಹಾಗೂ ಮಾನ್ಯ ಆಯುಕ್ತರ ಆದೇಶದಂತೆ ಈ ಕೆಳಕಂಡ ವ್ಯವಸ್ಥೆಗಳನ್ನು ವಾರ್ಡ್ ಮಟ್ಟದಲ್ಲಿ ಒದಗಿಸವ ಅವಶ್ಯಕತೆಗಳ ಬಗ್ಗೆ ಸಭೆಗೆ ವಿವರಿಸಲಾಯಿತು.

1) ಪಿ.ಹೆಚ್.ಸಿ ಕರ್ತವ್ಯ ಜವಬ್ದಾರಿ ಹಾಗೂ ಸೌಲಭ್ಯಗಳ ಬಗ್ಗೆ.
2) ಲಸಿಕಾ ಕಾರ್ಯಕ್ರಮ ಮತ್ತು ಕೋವಿಡ್-19 ಪರೀಕ್ಷೆ ಮತ್ತು ಫಲಿತಾಂಶ ಶೀಘ್ರವಾಗಿ ನೀಡುವ ಬಗ್ಗೆ.
3) ವಾರ್ಡ್‌ವಾರು ವಾರ್ ರೂಂ ಮತ್ತು ಕಾಲ್‌ಸೆಂಟರ್ ಸ್ಥಾಪಿಸುವ ಬಗ್ಗೆ.
4) ಕಡ್ಡಾಯವಾಗಿ ವ್ಯವಸ್ಥಿತ Triage ಕೇಂದ್ರಗಳನ್ನು ಸ್ಥಾಪಿಸುವುದು.
5) ಆಕ್ಸಿಜನ್ ಮತ್ತು ಸ್ಟೆಪ್‌ಅಪ್/ಸ್ಟಬಿಲೈಜೆಶನ್ ಸೆಂಟರ್ ಸ್ಥಾಪಿಸುವುದು.
6) ಕೋವಿಡ್ ಕೇರ್ ಕೇಂದ್ರಗಳ ಸ್ಥಾಪನೆ ಮತ್ತು ನಿರ್ವಹಣೆ.
7) ಐ.ಇ.ಸಿ ಹಾಗೂ ಪ್ರಚಾರ ಕಾರ್ಯಕ್ರಮಗಳು
8) ಅಂಬ್ಯುಲೆನ್ಸ್, ಕಛೇರಿ ವಾಹನ, ಪೀಠೋಪಕರಣಗಳನ್ನು ಒದಗಿಸುವುದು ನುರಿತ ವೈದ್ಯರು ಹಾಗೂ ಆಡಳಿತ ವರ್ಗದ ಸಿಬ್ಬಂದಿಗಳನ್ನು ನೇಮಿಸಿ ನಿಯೋಜಿಸುವ ಬಗ್ಗೆ.
9) ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸೋಂಕು ತಡೆಗಟ್ಟುವ ಸಲುವಾಗಿ ಸೋಂಕುನಿವಾರಕ ಔಷಧಿಯನ್ನು ಸಿಂಪಡಿಸಲು ತಿರ್ಮಾನಿಸಲಾಯಿತು.
10) ವಾರ್ಡ್ ವ್ಯಾಪ್ತಿಯಲ್ಲಿನ 18 ವರ್ಷಗಳಂದ ಮೇಲ್ಪಟ್ಟ ಸಾರ್ವಜನಿಕರಿಗೆ ಲಸಿಕೆಯನ್ನು ನೀಡುವ ಸಲುವಾಗಿ ಕ್ಯಾಂಪ್ ಗಳನ್ನು ನಡೆಸಲು ಆರೋಗ್ಯ ವೈದ್ಯಾಧಿಕಾರಿಗೆ ತಿಳಿಸಿದರು.
11) ವಾರ್ಡ್ ವ್ಯಾಪ್ತಿಯಲ್ಲಿನ ಕಂದಾಯ ಇಲಾಖೆಯ ಸಿಬಂದ್ಧಿಯವರು ಸೋಂಕಿತರ ಮನೆಗಳಿಗೆ ತೆರಳಿ ಹೊಂ ಐಸೋಲೆಷನ್ ಸಮರ್ಪಕವಾಗಿ ನಡೆಸಲು ತಿಳಿಸಿದರು.
12) ವಾರ್ಡ್ ವ್ಯಾಪ್ತಿಯ ಅಂಬೇಡ್ಕರ್ ನಗರ ನಿವಾಸಿಗಳಿಗೆ ಸಮರ್ಪಕವಾಗಿ ಕುಡಿಯುವ ನೀರಿನ ಸರಬರಾಜಾಗದೆ ಇದ್ದು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರು ಕೂಡಲೇ ಸ್ಥಳಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಕೊರಿದರು.
13) ವಾರ್ಡ್ ವ್ಯಾಪ್ತಿಯ ಅಂಬೇಡ್ಕರ್ ನಗರ ಹಾಗೂ ರೋಸ್ ಗಾರ್ಡನ್ ಪ್ರದೇಶದಲ್ಲಿ ಘನತ್ಯಜ್ಯ ನಿರ್ವಹಣೆ ಸಮರ್ಪಕವಾಗಿ ಆಗದಿರುವ ಕಾರಣ ಘನತ್ಯಾಜ್ಯ ನಿರ್ವಹಣೆ ಇಲಾಖೆಯವರು ಸೂಕ್ತ ಕ್ರಮ ಕೈಗೊಳ್ಳಲು ಕೊರಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಮಾತನಾಡುತ್ತಾ ಮೇಲೆ ತಿಳಿಸಿರುವಂತೆ ಎಲ್ಲಾ ಅಧಿಕಾರಿಗಳು ಕೆಲಸ ನಿರ್ವಹಿಸಲು ಕೋರುತ್ತಾ, ಮುಂದಿನ ಸಭೆಯಷ್ಟರಲ್ಲಿ ಸಂಬಂಧಿಸಿದ ಎಲ್ಲಾ ದೂರುಗಳನ್ನು ಪರಿಗಣಿಸಿ ತಿಳಿಸಲು ಕೋರಿದೆ ಹಾಗೂ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು. ಮುಂದಿನ ಸಭೆಯಲ್ಲಿ ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಮಿತಿಯ ಸದಸ್ಯರುಗಳಿಗೆ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸದಸ್ಯರುಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ವಾರ್ಡ್ ನಂ.116

ನೋಡಲ್ ಅಧಿಕಾರಿಗಳು
ವಾರ್ಡ್ ನಂ.116 ಹಾಗೂ ಡಿ.ಹೆಚ್.ಒ
ಶಾಂತಿನಗರ ವಿಭಾಗ